# ಸಾಂಸ್ಕೃತಿಕ ಪದಕೋಶ

ಅಗ್ರಾಹಾರ : ಬ್ರಾಹ್ಮಣರಿಗೆ ದಾನವಾಗಿ ನೀಡಿದ ಭೂಮಿ, ಬ್ರಾಹ್ಮಣರು ವಾಸಿಸುವ ಬೀದಿ

ಅಯ್ಯಗಳು (ಐಗಳು) : ವೀರಶೈವ ಮಠಾಧಿಪತಿಗಳು ಅಥವಾ ಗುರುಗಳು

ಆವಾಸ : ಗ್ರಾಮೀಣ ಪ್ರದೇಶದಲ್ಲಿ ನಿರ್ಮಿಸಿದ ಬೌದ್ಧ ಸನ್ಯಾಸಿಗಳ ಕುಟೀರ

ಆರಾಮ : ನಗರದಲ್ಲಿ ಬೌದ್ಧ ಶ್ರೀಮಂತ ವರ್ಗದ ಶಿಷ್ಯರು ನಿರ್ಮಿಸಿದ ಕುಟೀರ

ಉಪಾಚಾರ್ಯ : ವೀರಶೈವ ಗುರುಪೀಠಗಳ ಶಾಖಾಮಠಕ್ಕೆ ಸಂಬಂಧಿಸಿದ ಸ್ವಾಮಿಗಳು

ಕೈವಲ್ಯ : ಮೋಕ್ಷ, ಮುಕ್ತಿ

ಗಡಂಗು : ದಾಸ್ತಾನು ಮಳಿಗೆ

ಗಣಕುಮಾರ : ಹಿರೇಮಠಸ್ಥನ ಪೂಜಾ ಕಾರ್ಯಗಳ ಸಹಾಯಕ

ಗಣಾಚಾರ್ಯ : ಹಿರೇಮಠಸ್ಥನ ವಾರ್ತಾವಾಹಿಕ

ಗಣಾರಾಧನೆ : ಜಂಗಮರ ತೃಪ್ತಿಗಾಗಿ ಮಾಡುವ ಭೋಜನ ಸಮಾರಂಭ

ಚರಂತಿಗೆ : ಮಠಾಧಿಪತ್ಯ

ಚರಜಂಗಮ : ಸರ್ವಸಂಗ ಪರಿತ್ಯಾಗಿಗಳಾಗಿ ಸದಾಸಂಚರಿಸುವ ವೀರಶೈವ ಗುರು

ಜಂಗಮ : ಮಠವಿಲ್ಲದೆ ಸದಾ ಲೋಕಸಂಚಾರಿಯಾದ ವಿರಕ್ತ

ಜಂಗಮ ದೀಕ್ಷೆ : ಮಠಾಧಿಪತಿ ಆಗುವ ವಟುವಿಗೆ ಮಾಡುವ ಧಾರ್ಮಿಕ ಆಚರಣೆ

ತ್ರಿಕರಣ : ಕಾಯ, ವಾಕ್ಕು, ಮನಸ್ಸು

ದೀಪಾರಾಧನೆ : ದೇವತೆಗಳಿಗೆ ಸದಾಕಾಲ ದೀಪದ ಆರಾಧನೆ ನಡೆಸುವುದು

ದೇಣಿಗೆ : ದಾನ, ದತ್ತಿ

ದೇವಾದಾಯ : ದೇವಸ್ಥಾನಗಳಿಗೆ ದಾನ ಮಾಡಿದ ಭೂಮಿ

ದೇಶಿಕ : ಸಂಚಾರಿ ಧಾರ್ಮಿಕ ಗುರು

ಧರ್ಮದಾಸೋಹ :ಧರ್ಮಾರ್ಥವಾಗಿ ನಡೆಸುವ ಅನ್ನದಾನ

ಧರ್ಮಭಿಕ್ಷೆ : ಧರ್ಮದ ಆಚರಣೆಗಾಗಿ ಪಡೆಯುವ ಕಾಣಿಕೆ (ದಾನ)

ನೈಷ್ಟಿಕ ಆಚರಣೆ: ನಿಷ್ಠಾವಂತ ಧಾರ್ಮಿಕ ಆಚರಣೆ

ನೈಷ್ಟಿಕ ಬ್ರಹ್ಮಚಾರಿ :ವಿದ್ಯಾದಾನ ಮಾಡುವ ಬ್ರಹ್ಮಚಾರಿಗಳಾಗಿದ್ದ ಶೈವ ಗುರುಗಳು

ಪಟ್ಟ : ಧರ್ಮಾಧಿಕಾರ

ಪರಿವ್ರಾಜಕ : ಒಂದೇ ಕಡೆ ನೆಲೆ ನಿಲ್ಲದ ಸನ್ಯಾಸಿ (ಬೌದ್ಧಸನ್ಯಾಸಿ)

ಪರ್ಣಶಾಲೆ : ಎಲೆ ಮತ್ತು ಹಸಿರು ಹುಲ್ಲಿನಿಂದ ನಿರ್ಮಿಸಿದ ಮುನಿಗಳ ಕುಟೀರ (ಮನೆ)

ಪುರ : ವೀರಶೈವ ಗುರುಗಳಿಗೆ ನೀಡಿದ ಉಂಬಳಿ ಗ್ರಾಮ

ಬಿನ್ನವತ್ತಳೆ : ಸನ್ಮಾನ ಪತ್ರ; ಮಾನಪತ್ರ

ಬ್ರಹ್ಮಪುರಿ : ಬ್ರಾಹ್ಮಣರಿಗೆ ಮೀಸಲಾದ ಬೀದಿ; ಅಗ್ರಹಾರ

ಬ್ರಹ್ಮಾದಾಯ : ಬ್ರಹ್ಮಣರಿಗೆ ದಾನವಾಗಿ ನೀಡಿದ ಭೂಮಿ

ಮಠದಯ್ಯ : ಹಿರೇಮಠಸ್ಥ ಗ್ರಾಮಮಟ್ಟದ ಮಠಾಧಿಪತಿ

ಮಠಪತಿ : ಹೀರೇಮಠಸ್ಥನ ಸಹಾಯಕ

ಮುಮುಕ್ಷು : ಮೋಕ್ಷ ಅಥವಾ ಮುಕ್ತಿಯನ್ನು ಬಯಸುವವನು

ಮೊಕ್ಕಾಂ : ತಂಗುವಿಕೆ

ವಗೈರೆ : ಮುಂತಾದ, ಇತ್ಯಾದಿ

ವಟು : ಮಠದ ಅಧಿಪತಿಯಾಗಲು ಆಯ್ಕೆಯಾದ ಬಾಲಕ

ಶಿವಾರ್ಪಿತ : ಶಿವನ ಹೆಸರಿನಲ್ಲಿ ಒಪ್ಪಿಸಿದ ದಾನ

ಶೂನ್ಯಪೀಠ : ಅನುಭವ ಮಂಟಪದ ಅಧ್ಯಕ್ಷಪೀಠ, ವೀರಶೈವ ವಿರಕ್ತ ಪರಂಪರೆಯ ಧಾರ್ಮಿಕ ತತ್ತ್ವಾಚರಣೆ ತಿಳಿಸುವ ಶ್ರೇಷ್ಠ ಪೀಠ

ಷಟ್ಕರ್ಮ : ನಿತ್ಯ ಆಚರಿಸುವ ಸಂದಾಸ್ನಾನ, ಜಪ, ಹೋಮ, ದೇವತಾಪೂಜೆ, ಆತಿಥ್ಯ, ವೈಶ್ವದೇವ ಎಂಬ ಆರು ಬಗೆಯ ಕರ್ಮಗಳು

ಸಂಘರಾಮ : ಬೌದ್ಧ ಸನ್ಯಾಸಿಗಳ ವಾಸಸ್ಥಳ

ಸಿಂಹಾಸನ : ವೀರಶೈವ ಮಠಾಧಿಪತಿಗಳ ಶ್ರೇಷ್ಠವಾದ ಪೀಠ

ಸ್ಥಾವರಿಕ : ಹಿರೇಮಠಸ್ಥನ ಪೂಜಾ ಕಾರ್ಯಗಳಿಗೆ ಸಿದ್ಧತೆ ಮಾಡುವವ

ಹಿರೇಮಠಸ್ಥ : ಗ್ರಾಮದ ಗುರುವರ್ಗದ (ಪಟ್ಟದ) ಮಠಾಧ್ಯಕ್ಷ

ತ್ರಿವಿಧ ದಾಸೋಹ : ಜ್ಞಾನದಾಸೋಹ, ಅಕ್ಷರದಾಸೋಹ, ಅನ್ನದಾಸೋಹ

ಗುರುಕುಲ : ಬಾವಿ ಮಠಾಧಿಪತಿಗಳ ವಿದ್ಯಾಕೇಂದ್ರ

ಮಠ : ವೀರಶೈವ ಧಾರ್ಮಿಕ ಕೇಂದ್ರ

ಸವಣರು : ಜೈನ ಸನ್ಯಾಸಿಗಳ ನಿವಾಸ

ಚೈತ್ಯಾಲಯ : ಜೈನ ಬಸದಿಗಳು

ನೈಷ್ಠಿಕ ಸ್ಥಾನ : ಬ್ರಹ್ಮಚಾರಿಗಳಿರುವ ವಾಸಸ್ಥಳ

ಮಹಾಪಾಶುಪತ : ಅಂಗದ ಮೇಲೆ ಲಿಂಗಧಾರನೆ ಮಾಡಿ ಅದನ್ನ ಪೂಜಿಸುವವನೂ ಮಹಾಪಾಶುಪತಎನ್ನುವರು

ವೀರಶೈವ : 'ವೀ' ಎಂದರೆ ವಿದ್ಯೆ 'ರ' ಎಂದರೆ ರಮಿಸುವುದು ಅಂದರೆ 'ವೀರಶೈವ' ವಿದ್ಯೆಯಲ್ಲಿ ನಿರತನಾದವನು

ಪಂಚಾಕ್ಷರಿ : ನಮಃಶಿವಾಯ

ಷಡಕ್ಷರ : ಓಂ ನಮಃಶಿವಾಯ

ಪಂಚಾಚಾರ್ಯ : ರೇವಣಾಧ್ಯರು, ಮರುಳಾರಾಧ್ಯರು, ಏಕೋರಾಮಾರಾಧ್ಯರು, ಪಂಡಿತಾರಾಧ್ಯರು, ವಿಶ್ವಾರಾಧ್ಯರು

ಪಂಚಮುಖಗಳು: ಸದೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ

ಪಂಚಪೀಠಗಳು : ವೀರಪೀಠ, ಧರ್ಮಪೀಠ, ವೈರಾಗ್ಯಪೀಠ, ದೇವಪೀಠ, ಜ್ಞಾನಪೀಠ

ಪಂಚಾಪೀಠ ಸ್ಥಳಗಳು : ರಂಬಾಪುರಿ, ಉಜ್ಜಯನಿ, ಹಿಮವತ್ಕೇದಾರ, ಶ್ರೀಶೈಲ, ಕಾಶಿ

ಅಷ್ಟಾವರಣಗಳು : ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ ರುದ್ರಾಕ್ಷಿ, ಮಂತ್ರ

ಗುರುವರ್ಗದ ಮಠ: ಪಂಚ ಪೀಠಗಳು

ಪಟ್ಟದಮಠ : ಗುರುಗಳಿಂದ ವಂಶಪಾರಂಪರ್ಯವಾದುದು

ವಿರಕ್ತಮಠ : ಶೂನ್ಯ ಪೀಠದ ಪರಂಪರೆ

ದಾಸೋಹಮಠ : ಕಂತೇಭಿಕ್ಷೆ ಮಾಡಿ ಮಠಕ್ಕೆ ಬಂದಂತ ಭಕ್ತರಿಗೆ ಅನ್ನದಾಸೋಹ ಮಾಡುವುದು

ಕಂತೇಭಿಕ್ಷೆ : ವೀರಶೈವ ಮಠಾಧಿಪತಿಗಳು ಹಲವಾರು ವರ್ಷಗಳ ಕಾಲ ಪ್ರತಿನಿತ್ಯ ಎರಡುಬಾರಿ ನಿರ್ದಿಷ್ಟ ಮನೆಗಳಿಂದ ಕೂಳನ್ನು ಸಂಗ್ರಹಿಸಿ ಭಕ್ತಿರಿಗೆ ಪ್ರಸಾದದ ರೂಪದಲ್ಲಿ ನೀಡುವುದು

ಚರಂತಿಗೆ ಪಟ್ಟ : ಶೂನ್ಯ ಸಿಂಹಾಸನದ ಪೀಠಾಧಿಕಾರವನ್ನು ಚರಂತಿಗೆ ಪಟ್ಟ ಎನ್ನುತ್ತಾರೆ

ದಶಕರ್ಮಗಳು : ಗರ್ಭದಾನ, ಪುಂಸವನ, ಸೀಮಂತ, ಜಾತಕಕರ್ಮ, ನಾಮಕರಣ, ಅನ್ನಪ್ರಾಸನ, ಚೌಲ, ದೀಕ್ಷಾ, ವಿವಾಹ, ಅಂತ್ಯೇಷ್ಠಿ

ಪಂಚಾವೃತ್ಯಾಚಾರ್ಯರು : ಮಠದಯ್ಯ, ಗಣಾಚಾರಿ, ಮಠಪತ್ತಿ, ಗಣಕುಮಾರ, ಸ್ಥಾವರಿಕ

ನಿರಾಭಾರಿ : ಜಂಗಮತ್ವದಿಂದ ವೈರಾಗ್ಯ ಸ್ಥಿತಿವಿರಕ್ತಿ ಇದನ್ನ ನಿರಾಭಾರಿ ಎನ್ನುತ್ತಾರೆ

ಸಮಯಬೇದ : ಒಂದು ಒಪ್ಪಿತವಾದ ವ್ಯವಸ್ಥೆ, ಕಟ್ಟುಪಾಡು ಎಂದರ್ಥ

ಸಮಯಭೇಧಗಳು : ಕೆಂಪಿನ ಸಮಯ, ಕುಮಾರ ಸಮಯ, ಸಂಪಾದನೆಯ ಸಮಯ, ಚೀಲಾಳ ಸಮಯ, ಮುರಿಗ ಸಮಯ

ನಿರಾಭಾರಿಜಂಗಮ : ದಂಡ, ಕೌಪೀನ, ಕಂಥಾ ಕಮಂಡಲಧಾರಿಯಾದ ಕೇಶರಾಶಿ ಅಥವಾ ಕೇಶಮುಂಡನದಾರಿ ಅಥವಾ ಕಾಷಾಯ ವಸ್ತ್ರಧಾರಿ

| | | |
|---|---|---|
| ಅರ್ಚಕರು | : | ದೇವಾಲಯದಲ್ಲಿ ಶಿವಪೂಜೆ ಮಾಡುವ ವೀರಶೈವರು (ತಮ್ಮಡಿಗಳು) |
| ದರೋಗರು | : | ಸರ್ಕಾರದ ವತಿಯಿಂದ ಗ್ರಾಮದ ಮೇಲ್ವಿಚಾರಣೆ ನಡೆಸುವ ಅಧಿಕಾರಿಗಳು |
| ಸಾಬಾರಿ | : | ಸಕಲ ವೈಭವಯುಕ್ತವಾದ ಪಂಚ ಪೀಠಾಧ್ಯಕ್ಷರಾದವರು (ಪಂಚಸಿಂಹಾಸನ_ |
| ನಿರಾಬಾರಿ | : | ಕೇವಲ ಆದ್ಯಾತ್ಮ ಸಿರಿಯ ಶೂನ್ಯ ಪೀಠ (ಶೂನ್ಯ ಸಿಂಹಾಸನ) |
| ಪಂಚಾಚಾರ | : | ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ |
| ಷಟ್ಸ್ಥಲ | : | ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ |